**ಸಾಕ್ಷಿಯನ್ನು ದಿಃ 21.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದಿನಾಂಕ 02.09.2024 ರಂದು ನನಗೆ ಅಪಘಾತವಾಯಿತು. ಅಪಘಾತದ ಸ್ಥಳದಲ್ಲಿ ದ್ವಿಮುಖ ರಸ್ತೆ ಇದ್ದು, ಡಿವೈಡರ್ ಇದೆ ಎಂದರೆ ಸರಿ. ವಾಹನಗಳು ಒಂದು ಕಡೆಯಿಂದ ಹೋದರೆ ಮತ್ತೊಂದು ಕಡೆಯಿಂದ ಬರುತ್ತವೆ. ಆ ಸ್ಥಳದಲ್ಲಿ ವಾಹನ ಸಂಖ್ಯೆ ಹೆಚ್ಚಿರುತ್ತದೆ ಎಂದರೆ ಸರಿಯಲ್ಲ. ಸಿಗ್ನಲ್ ಇದ್ದ ಬಳಿ ಮಾತ್ರ ಪಾದಚಾರಿಗಳು ರಸ್ತೆ ದಾಟಬೇಕು ಎಂದರೆ ಸರಿ. ನಾನು ಸಿಗ್ನಲ್ ಬಳಿ ರಸ್ತೆ ದಾಟಿಲ್ಲ ಎಂದರೆ ಸರಿಯಲ್ಲ, ಡಿವೈಡರ್ ದಾಟಿ ರಸ್ತೆ ದಾಟುತ್ತಿದ್ದ ಕಾರಣ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಕಾರು ಚಾಲಕನೇ ನನ್ನನ್ನು ಸೌಖ್ಯ ಆಸ್ಪತ್ರೆಗೆ ಸೇರಿಸಿದ್ದಾನೆ ಎಂದರೆ ಸರಿ.

ನಾನು ಕೂಲಿ ಮತ್ತು ವ್ಯವಸಾಯ ಮಾಡುತ್ತಿದ್ದೆ. ಅದೇ ದಿನ ನಾನು ಆಸ್ಪತ್ರೆಗೆ ದಾಖಲಾಗಿ 5 ದಿನಗಳ ನಂತರ ಬಿಡುಗಡೆಯಾಗಿದ್ದೇನೆ ಎಂದರೆ 8-10 ದಿನದ ನಂತರ ಬಿಡುಗಡೆಯಾಗಿದ್ದೇನೆ ಎನ್ನುತ್ತಾರೆ. ದೂರನ್ನು ನನ್ನ ಪತ್ನಿ ದಿವ್ಯಶ್ರೀ ನೀಡಿದ್ದಾರೆ. ಪೊಲೀಸ್ ದಾಖಲೆಗಳ ಪ್ರಕಾರ ನಾಗರಾಜುರವರು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿ. ನಿ.ಪಿ-11 ಸೌಖ್ಯ ಆಸ್ಪತ್ರೆಗೆ ಸಂಬಂಧಿಸಿದ್ದು, ಎಂದರೆ ಸರಿ. ಬೇರೆ ಯಾವುದೇ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಘನಿಷ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿಲ್ಲ ಎಂದರೆ ಸೌಖ್ಯ ಆಸ್ಪತ್ರೆಯೇ ಘನಿಷ ಆಸ್ಪತ್ರೆ ಆಗಿದೆ ಎಂದು ನುಡಿಯುತ್ತಾರೆ. ಔಷಧಿ ಖರ್ಚುಗಳಿಗೆ ನಾವೇ ಪಾವತಿಸಿದ್ದೇವೆ. ಎಷ್ಟು ಅಡ್ವಾನ್ಸ್ ಕೊಟ್ಟಿದ್ದೇವೆ ಎಂದು ನನ್ನ ಪತ್ನಿಗೆ ತಿಳಿದಿದೆ.

ನಿ.ಪಿ-12 ಐ.ಪಿ.ಬಿಲ್ಲು ಸಮ್ಮರಿ ಎಂದರೆ ಸರಿ. ಡಾ.ಸಂತೋಷ ಎಂಬುವರು ನನಗೆ ಚಿಕಿತ್ಸೆ ನೀಡಿದ್ದಾರೆ. ನನಗೆ ಬಿಪಿಎಲ್ ಕಾರ್ಡ್ ಇದೆ. ಆದ ಕಾರಣ ನನಗೆ ಔಷಧಿ ಬಿಲ್ಲುಗಳು ಉಚಿತವಾಗಿ ಸಿಗುತ್ತವೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.20,000/- ಸಂಪಾದಿಸುವ ಬಗ್ಗೆ ದಾಖಲೆ ಹಾಜರುಪಡಿಸದ ಕಾರಣ ಅದು ಸುಳ್ಳು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ 3 ದಿನ ಇದ್ದೆ ಎಂದರೆ ಸರಿಯಲ್ಲ. ನಾನು ಫನಿಷ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ನಿ.ಪಿ-10 ಮತ್ತು 12 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನಿಂತುಕೊಳ್ಳಲು ಆಗುವುದಿಲ್ಲ ಎನ್ನುತ್ತಾರೆ. ಆರೋಗ್ಯವಂತನಾದ ಕಾರಣ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ತೆಗೆದುಕೊಳ್ಳುತ್ತಿರುವ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**

**ಮತ್ತು ಎಂ.ಎ.ಸಿ.ಟಿ., ಮೈಸೂರು.**